**ಸಾಕ್ಷಿಯನ್ನು ದಿನಾಂಕಃ 18-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಎ.ಜಿ.ಪಿ ವಕೀಲರವರಿಂದಃ**

ನಾನು LLB ಕಲಿತಿದ್ದೇನೆ. ನನ್ನ ಮಗನ ಜನ್ಮ ನಾಮ ಶರತ್ ಗೌಡ ಅಂದರೆ ಸರಿ. ನಾನು ಆ ಹೆಸರನ್ನು ಸದಾನಂದಗೌಡ ಎಂದು ತಾಲೂಕು ಕಚೇರಿಗೆ ಅರ್ಜಿಯನ್ನು ಕೊಟ್ಟು ಸರಿ ಮಾಡಿಸಿದ್ದೇನೆ ಅಂದರೆ ಸರಿ. ನನಗೆ ಆ ರೀತಿ ಸರಿ ಪಡಿಸಲು ಸಾಂವಿದಾನದ ಹಕ್ಕು ಇದ್ದ ಕಾರಣ ಬದಲಾವಣೆ ಮಾಡಿಸಿದ್ದೇನೆ. ನನ್ನ ವಾದ ಪತ್ರದಲ್ಲಿ ಜ್ಯೊತಿಷರು ಹೇಳಿದ ಕಾರಣ ಸದಾನಂದಗೌಡ ಎಂಬ ಹೆಸರನ್ನು ವಿಕಾಸಗೌಡ ಎಂದು ಬದಲಾಣೆ ಮಾಡಬೇಕು ಎಂದು ಹೇಳಿದ್ದೇನೆ ಅಂದರೆ ಸರಿ. ಜ್ಯೊತಿಷರು ಅಬಿಪ್ರಾಯವನ್ನು ಬವಣಿಗೆಯಲ್ಲಿ ನೀಡಿರುವುದಿಲ್ಲ ಆದ್ದರಿಂದ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ತಹಶಿಲ್ದಾರರರಿಗೆ ಹೆಸರು ಬದಲಾವಣೆ ಮಾಡಲು ಅರ್ಜಿ ಕೊಟ್ಟ ಸಮಯದಲ್ಲಿ ಜ್ಯೊತಿಷರು ವಿಕಾಸಗೌಡ ಎಂಬ ಹೆಸರು ನನ್ನ ಮಗನಿಗೆ ಸರಿ ಹೊಂದುತ್ತದೆ ಎಂದು ನನಗೆ ಹೇಳಿರಲಿಲ್ಲ.

2. ನನ್ನ ಮಗ 1 ಮತ್ತು 2 ನೇ ತರಗತಿಗಳನ್ನು ನವೋದಯ ಹಿರಿಯ ಪ್ರಾರ್ಥಮಿಕ ಶಾಲೆಯಲ್ಲಿ ಓದಿರುವರು. 3 ರಿಂದ 5 ನೇ ತರಗತಿಯನ್ನು ಪರ್ಲ ಪಬ್ಲಿಕ್ ಸ್ಕೂಲ್ ನಿಚ್ಚಾಪುರದಲ್ಲಿ ಓದಿರುವರು. 6 ನೇತರಗತಿಯಿಂದ ಈಗ 9 ನೇ ತರಗತಿಯವರೆಗೂ JNV ಚಿಕ್ಕಜೋಗಿಹಳ್ಳಿ ಕೂಡ್ಲಿಗಿ ತಾಲ್ಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವನು. ಈಗ ಸರ್ಕರಿ ದಾಖಲೆಗಳಲ್ಲಿ ಹೆಸರನ್ನು ಬದಲಾವಣೆ ಮಾಡಿದರೆ ಸರ್ಕಾರದ ಸಮಯ ಮತ್ತು ಹಣ ವ್ಯರ್ಥವಾಗುತ್ತದೆ ಅಂದರೆ ಸರಿಯಲ್ಲ. ನಾನು ವಾದ

ಪತ್ರದಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಿರುವುದಿಲ್ಲ ಅಂದರೆ ಸರಿಯಲ್ಲ. ಸರ್ಕಾರಿ ಅಧಿಕಾರಿಗಳನ್ನು ಅನಾವಶ್ಯಕವಾಗಿ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.12.2025